

ಪತ್ನಿ ಶಾಂತಾದೇವಿ ಕಣವಿ ಅವರೊಂದಿಗೆ ಚೆನ್ನವೀರ ಕಣವಿ

ಕಾವ್ಯಮೀಮಾಂಸೆಯನ್ನು ಬಯಸುತ್ತದೆ. ರೂಢಿಯ ಕಾವ್ಯ ಸಂವೇದನೆಗೆ ಸವಾಲಾಗಿ ನಿಲ್ಲುತ್ತದೆ. ಹೀಗಾಗಿಯೇ ಈ ಮಾದರಿಯ ಕವಿಗಳು ಶ್ರೇಷ್ಠ ಕಾವ್ಯಶಿಲ್ಪಿಗಳಾಗಿರುತ್ತಾರೆ. ಕವಿತೆಗೆ ಕುಸುರಿಕೆಲಸದ ಚಿತ್ತಾರದ ಚೆಲುವು ನೀಡಿ ಗಮನ ಸೆಳೆಯುತ್ತಾರೆ. ಕಣವಿಯವರ ಕಲೆಗಾರಿಕೆಯನ್ನು ಕನ್ನಡ ವಿಮರ್ಶೆ ಸಾಕಷ್ಟು ಕೈವಾರಿಸಿದೆ. ಸಾನೆಟ್ ಬಳಕೆಯಲ್ಲಂತೂ ಕಣವಿಯವರದು ಅನನ್ಯ ಸಾಧನೆ. ವ್ಯಕ್ತಿಚಿತ್ರಗಳ ಅವರ ಸಾನೆಟ್ ಸರಣಿ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ಒಂದು ಎಳೆಯನ್ನು ಒಳಗೊಂಡಂತೆ ತೋರುತ್ತದೆ. ತಮ್ಮ ವಿಚಾರಗಳ ಪ್ರತಿಪಾದನೆಗೂ ಕಣವಿಯವರು ಸಾನೆಟ್ಟನ್ನು ಪರಿಣಾಮಕಾರಿಯಾಗಿ ಬಳಸಿದ್ದಾರೆ. ಶಾಂತಿನಾಥ ದೇಸಾಯಿಯವರು ಹೇಳುವಂತೆ 'ಕಣವಿಯವರ ಸಾನೆಟ್‌ಗಳು 'ಇಂಟೆಲೆಕ್ಚುಯಲ್ ಲಿರಿಕ್ಸ್' (ವೈಚಾರಿಕ ಭಾವಗೀತೆಗಳು).

ಜಿ.ಎಸ್. ಶಿವರುದ್ರಪ್ಪನವರ ಕಾವ್ಯ ಮನೋಭಾವ ಕಣವಿಯವರಿಗೆ ಹತ್ತಿರವಾದರೂ ಶಿವರುದ್ರಪ್ಪನವರದು ಕಣವಿಯವರಂತೆ ಉದ್ವಿಗ್ನಗೊಳ್ಳದ ಸಮಾಧಾನದ ಸ್ಥಿತಿಯಲ್ಲ; ಸಮಕಾಲೀನ ಸಮಾಜದ ಕೊಳಕುತನದ ಬಗ್ಗೆ ಅವರು ವ್ಯಗ್ರರಾಗುತ್ತಾರೆ, ಸಿಡಿಮಿಡಿಗೊಳ್ಳುತ್ತಾರೆ. ಎಂತೆಂಥವೋ ಏರಬಾರದ ಕಡೆಗೆ ಏರಿ ಇಳಿಯಬಾರದ ಕಡೆಗೆ ಇಳಿದು ಕೆಡಿಸಿ ಹೊಲಸೆಬ್ಬಿಸುವುದನ್ನು ಕಂಡು ಕಿಡಿ ಕಾರುತ್ತಾರೆ. ಕಣವಿಯವರಿಗೂ ಇದೆಲ್ಲದರ ಅರಿವಿದೆ. ವಾಸ್ತವದ ಕಟು ಅನುಭವಕ್ಕೆ, ನಾಗರಿಕ ಸಮಾಜದ ನಯವಂಚಕತನಕ್ಕೆ ಕಣವಿಯವರ ಕವಿಚೇತನ ನಡುಗಿದೆ; ಸಿಡಿಲೆರಗಿದ ಅನುಭವವಾಗಿದೆ. 'ಮೊನ್ನೆ ಮೊನ್ನೆಯೇ ಆಯಿತೆನಗೆ ತಾನಾಗಿಯೇ / ಇವನೊಡಲ ಬ್ರಹ್ಮಾಂಡ ಮಹಾದ್ಭುತ ವಿಶ್ವರೂಪ ದರ್ಶನ / ಸಿಡಿಲೆರಗಿದಂತಾಯ್ತು ನಡುಗಿಹೋಯಿತು ನನ್ನ ಅತ್ಯಲ್ಪ ಚೇತನ' (ಅಪರಾವತಾರ). ನಾಗರಿಕ ಬದುಕಿನ ವಿಕೃತಿಗೆ ಕಣವಿಯವರ ಸೃಜನಶೀಲ ಪ್ರತಿಭೆ ತೀವ್ರವಾಗಿ ಸ್ಪಂದಿಸಿದೆ. ಸಾಮಾಜಿಕ ಮೌಲ್ಯಗಳು ಅವನತಿಯ ಹಾದಿ ಹಿಡಿದ ಬಗ್ಗೆ ಗಾಢ ವಿಷಾದ ವ್ಯಕ್ತವಾಗಿದೆ. ಸುತ್ತಮುತ್ತ ಆವರಿಸಿದ